

ಕತಾರ್ ಪಾರ್ಲಿಮೆಂಟ್ ಹೌಸ್ ಅಮೀರಿ ದೀವಾನ್

# ಕತಾರ್ ಕೊರ್ನೀಶ್

**ಕತಾರಿನ ಕೊರ್ನೀಶ್ ಅರ್ಧ ಚಂದ್ರಾಕಾರದ ಸಮುದ್ರ ತೀರವಾಗಿದ್ದು ಸುಮಾರು 8 ಕಿ.ಮೀಗಳಷ್ಟು ಉದ್ದವಿದೆ. ತೀರದುದ್ದಕ್ಕೂ ವಾಕಿಂಗ್ ಹೋಗುವವರಿಗಾಗಿ ಕಲ್ಲು ಮತ್ತು ಸಿಮೆಂಟಿನ ಸುಂದರವಾದ ದಾರಿಯಿದೆ. ಪಕ್ಕದಲ್ಲಿಯೇ ಹಸಿರು ಹುಲ್ಲಿನ ಲಾನ್, ವರ್ಷವಿಡೀ ಹಸಿರಾಗಿರುತ್ತದೆ.**





ಚಿತ್ರ– ಲೇಖನ:
**ಗೀತಾ ಕುಂದಾಪುರ**

**ಕೊ**ಲ್ಲಿ ರಾಷ್ಟ್ರಗಳಾದ ಓಮನ್, ಅಬುಧಾಬಿ, ದುಬೈ, ಬಹ್ರೇನ್, ಕತಾರ್ ಮತ್ತು ಸೌದಿ ಅರೇಬಿಯಾದ ಪ್ರಮುಖ ಆಕರ್ಷಣೆಗಳಲ್ಲಿ ಕೊರ್ನೀಶ್ **(Corniche)** ಕೂಡಾ ಮುಖ್ಯವಾದದ್ದು.

ಕತಾರ್ ಪಶ್ಚಿಮ ಏಶ್ಯಾದಲ್ಲಿರುವ ಚಿಕ್ಕ ಕೊಲ್ಲಿ ರಾಷ್ಟ್ರ. ಇದರ ಒಟ್ಟು ವಿಸ್ತೀರ್ಣ ಕರ್ನಾಟಕದ ಶೇಕಡಾ 6ರಷ್ಟು. ದೋಹಾ ರಾಜಧಾನಿ. ಹೆಚ್ಚಿನ ಕೊಲ್ಲಿ ರಾಷ್ಟ್ರಗಳಂತೆ ಎಣ್ಣೆ ಮತ್ತು ಅನಿಲವೇ ಬಂಡವಾಳ. ಇಲ್ಲಿನ ಕೊರ್ನೀಶ್, ಒಂದು ವಾಕಿಂಗ್ ತಾಣ. ಆದರೆ ಅದೀಗ ದೇಶದ ಪ್ರಗತಿಯನ್ನು ಬಿಂಬಿಸುವ ಹಾಗೂ ದೇಶ, ವಿದೇಶಿ ಜನರ ಮುಖಾಮುಖಿಯ ತಾಣವೂ ಹೌದು. ಕೊರ್ನೀಶಿನಲ್ಲಿ ವಾಕ್ ಮಾಡಿದರೂ ಸಾಕು, ಅರ್ಧ ದೇಶ ನೋಡಿದಂತೆಯೇ! ದೇಶದ ರಾಜಕೀಯ, ಆರ್ಥಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಪ್ರತಿಬಿಂಬ ಇಲ್ಲಿ ಕಾಣಸುತ್ತದೆ. 18 ವರ್ಷಗಳ ಕತಾರ್ ವಾಸದ ಬಳಿಕ ಊರಿಗೆ ಹಿಂತಿರುಗಿದ್ದರೂ, ಅಲ್ಲಿನ ಕೊರ್ನೀಶ್ ಮರೆಯಲಾಗದು.

ಕತಾರಿನ ಕೊರ್ನೀಶ್ ಅರ್ಧ ಚಂದ್ರಾಕಾರದ ಸಮುದ್ರ ತೀರವಾಗಿದ್ದು 8 ಕಿ.ಮೀಗಳಷ್ಟು ಉದ್ದವಿದೆ. ತೀರದುದ್ದಕ್ಕೂ ವಾಕಿಂಗ್ ಹೋಗುವವರಿಗಾಗಿ ಕಲ್ಲು ಮತ್ತು ಸಿಮೆಂಟಿನ ಸುಂದರವಾದ ದಾರಿಯಿದೆ. ಪಕ್ಕದಲ್ಲಿಯೇ ಹಸಿರು ಹುಲ್ಲಿನ 'ಲಾನ್', ಖರ್ಜೂರದ ಮರಗಳು, ಕಾಯಿ ಇಲ್ಲದ ತೆಂಗಿನ ಮರಗಳಿವೆ. ಮರುಭೂಮಿಯಲ್ಲಿರುವ ಈ ಲಾನ್‌ಗಳು ವರ್ಷದ 365 ದಿವಸವೂ ಹಸಿರಾಗಿರುತ್ತವೆ! ಸಂಸ್ಕರಿಸಿದ ತ್ಯಾಜ್ಯ ನೀರೇ ಇವುಗಳಿಗೆ ಜೀವ ನೀಡುತ್ತದೆ. ವಾರಾಂತ್ಯದಲ್ಲಿ ಮನೆಯಿಂದ ಅಡಿಗೆ ಮಾಡಿ ತಂದು ಇಲ್ಲಿ ಕುಳಿತು ಊಟ ಮಾಡುವವರ ದೊಡ್ಡ ಗುಂಪೇ ಇದೆ. ಅಲ್ಲಿ ಇಲ್ಲಿ ಮೀನು ಹಿಡಿಯಲು ಗಾಳ ಹಿಡಿದು ಕೂತ ಜನರೂ ಕಾಣಸಿಗುತ್ತಾರೆ.

ಕಾರ್ನಿಶ್‌ನಲ್ಲಿ ದಿನದ ಯಾವ ಹೊತ್ತಿನಲ್ಲೂ ವಾಕಿಂಗ್ ಹೋಗುಬಹುದು. ಮಧ್ಯರಾತ್ರಿ ಹೋದರೂ, ನಿದ್ದೆ ಬಾರದ ನಿಶಾಚರರು ವಾಕಿಂಗ್ ಮಾಡುತ್ತಿರುವುದನ್ನು ಇಲ್ಲಿ ನೋಡಬಹುದು! ಆದರೆ ವಾರದ ರಜಾ ದಿನವಾದ ಶುಕ್ರವಾರದ ಸಂಜೆ ಮಹಿಳೆಯರಿಗೆ ಮತ್ತು ಕುಟುಂಬ ಸಮೇತವಾಗಿ ಬಂದವರಿಗೆ ಮಾತ್ರ ಇಲ್ಲಿ ಪ್ರವೇಶವಿದೆ. ಏಕಾಂಗಿ ಪುರುಷರಿಗೆ ಪ್ರವೇಶವಿಲ್ಲ!

ಜೂನ್, ಜುಲೈ, ಆಗಸ್ಟ್, ಸೆಪ್ಟೆಂಬರ್ ಬೇಸಿಗೆ ಕಾಲದಲ್ಲಿ, ಮಧ್ಯಾಹ್ನದ ತಾಪಮಾನ 50 ಡಿಗ್ರಿಯವರೆಗೆ ಏರುವುದೂ ಇದೆ. ಇದು ಖರ್ಜೂರ ಹಣ್ಣಾಗುವ ಕಾಲ, ಖರ್ಜೂರದ ಹಣ್ಣುಗಳನ್ನು ಯಂತ್ರದ ಸಹಾಯದಿಂದ ಕೊಯ್ಯುವ ಕೆಲಸ ಮುನಿಸಿಪಾಲ್ಟಿಯವರದ್ದು. ಬಿದ್ದ ಹಣ್ಣುಗಳನ್ನು ಹೆಕ್ಕುವವರೂ ಇದ್ದಾರೆ. ತಾಜಾ ಖರ್ಜೂರ ಹಣ್ಣಿನ ರುಚಿ ತಿಂದವನೇ ಬಲ್ಲ.

ಡಿಸೆಂಬರ್, ಜನವರಿ, ಫೆಬ್ರುವರಿ ತಿಂಗಳ ಚಳಿಗಾಲದಲ್ಲಿ, ಕೊರ್ನೀಶ್ ಹೂವುಗಳಿಂದ ಸಿಂಗಾರಗೊಳ್ಳುವ ಕಾಲ. ಹಳದಿ, ಕೇಸರಿ ಬಣ್ಣದ ಗೊಂಡೆ ಹೂವಿನ ಗಿಡಗಳ ಸಾಲುಗಳು ದಾರಿಯುದ್ದಕ್ಕೂ! ದೇಶದಲ್ಲಿ ಅಂತರಾಷ್ಟ್ರೀಯ ಸಮ್ಮೇಳನವಿದ್ದರೆ, ಆಟೋಟ ಸ್ಪರ್ಧೆಗಳಿದ್ದರೆ ರಾತ್ರೋರಾತ್ರಿ ಕೊರ್ನೀಶ್ ಹೂವಿನ ಕುಂಡಗಳಿಂದ ಅಲಂಕಾರಗೊಳ್ಳುತ್ತದೆ.

ದೋಹ ಒಂದು ಕಾಲಕ್ಕೆ ಮರುಭೂಮಿಯ ನಗರವಾಗಿದ್ದು ಈಗ ಉದ್ಯಾನ ನಗರವಾಗಿದೆ. ಕೊರ್ನೀಶಿನ ಪಕ್ಕದುದ್ದಕ್ಕೂ ದೋಹಾದ ಮುಖ್ಯ ರಸ್ತೆಯಿದ್ದು, ರಸ್ತೆಯ ಪಕ್ಕದಲ್ಲೇ ಗಗನಚುಂಬಿ ಆಧುನಿಕ ಕಟ್ಟಡಗಳಿವೆ. 2000 ಇಸವಿಯವರೆಗೂ ಮೇಲೆ ವಿಮಾನದಿಂದ ನೋಡಿದರೆ, ರಾಜಧಾನಿ ದೋಹಾ ಮರುಭೂಮಿಯ ನಡುವೆ ಇರುವ ಒಂದು ಚಿಕ್ಕ ನಗರದಂತಿತ್ತು. ದೇಶವನ್ನು ಆಧುನೀಕರಿಸುವ ಸಲುವಾಗಿ ಕೊರ್ನೀಶಿನ ಪಕ್ಕದ ದಾರಿಯುದ್ದಕ್ಕೂ ಬಹು ಮಹಡಿಯ ಆಧುನಿಕ ವಿನ್ಯಾಸದ ಗಗನಚುಂಬಿ ಕಟ್ಟಡಗಳು ಮೇಲೆದ್ದವು. ಹೆಚ್ಚಿನ ಕಟ್ಟಡದ ಗೋಡೆಗಳು ಬಣ್ಣ ಬಣ್ಣದ ಗಾಜಿನಿಂದ ಕೂಡಿದ್ದು, ಇಡೀ ಪರಿಸರದ ಮತ್ತು ಕಟ್ಟಡಗಳ ಸೌಂದರ್ಯವನ್ನು ಇಮ್ಮಡಿಸಿದೆ. ರಾತ್ರಿಯಾಗುತ್ತಿದ್ದಂತೆಯೇ ಈ ಕಟ್ಟಡಗಳೆಲ್ಲ ಬಣ್ಣ ಬಣ್ಣದ ದೀಪಗಳಿಂದ ಕಂಗೊಳಿ–